ಅದು ಕಳೆದುಹೋಗಲ್ಲ ಅಲ್ಲವಾ?' ತನ್ನನ್ನೇ ನಂಬಿಸಿಕೊಳ್ಳಲು ಆಡಿದಂತೆ ವಿಭಾವರಿ ಮಾತನಾಡುತ್ತಿದ್ದಳು. ಆ ಕ್ಷಣದಲ್ಲಿ ಅವರೆಲ್ಲರ ವಿದ್ಯೆ, ಊರು, ಉದ್ಯೋಗ ಎಲ್ಲವನ್ನೂ ಮೀರಿದಂತಹುದೇನೋ ಅವರನ್ನು ಬೆಸೆಯುತ್ತಿತ್ತು. ಯಾರ ಸಮಸ್ಯೆಗೂ ಇನ್ನೊಬ್ಬರು ಪರಿಹಾರ ಕೊಟ್ಟಿರಲಿಲ್ಲ, ಆದರೆ ಅವರವರ ಲೋಕಗಳಿಗೆ ಸೇರಿಲ್ಲದ ಈ ಬಹುತೇಕ ಅಪರಿಚಿತರೆದುರು ತಮ್ಮೊಳಗನ್ನು ಹೇಳಿಕೊಂಡದ್ದು ಅವರಿಗೆ ಆ ಕ್ಷಣದ ಬಿಡುಗಡೆಯನ್ನು ಕೊಟ್ಟಿತ್ತು. ಇವರ್‍ಯಾರೂ ತಮ್ಮ ದೈನಂದಿನ ಬದುಕಿಗೆ ಬರುವುದಿಲ್ಲ ಎನ್ನುವುದರಲ್ಲಿ ಅವರ ನಿರಾಳತೆ ಇತ್ತು. ಏಕೆಂದರೆ, ಏನೇ ಆಡಲಿ, ರೇಗಲಿ ಅವರು ಮತ್ತೆ ತಮ್ಮ ಬದುಕುಗಳಿಗೆ ಹಿಂದಿರುಗಲೇಬೇಕು, ಆದರೆ ಧೋ ಎಂದು ಧಾರಾಕಾರವಾಗಿ ಸುರಿಯುತ್ತಿದ್ದ ಈ ಮಳೆಯ ರಾತ್ರಿಯಲ್ಲಿ, ಒಬ್ಬರ ಮುಖ ಇನ್ನೊಬ್ಬರಿಗೆ ಸ್ಪಷ್ಟವಾಗಿ ಕಾಣಿಸದ ಮಂದ ಬೆಳಕಿನಲ್ಲಿ ಆ ಮೂವರೂ ತಮ್ಮತಮ್ಮ ಮನಸ್ಸಿನಲ್ಲಿದ್ದ ಅವಮಾನ, ನೋವು, ಅನುಮಾನ, ಗೊಂದಲಗಳ ಮೂಟೆಯನ್ನು ಕ್ಷಣಕಾಲ ಇಳಿಸಿ ನಿರಾಳವಾಗಿದ್ದರು. ಭಗವಂತ ತನ್ನ ಸರದಿ ಬರದೆ ತಪ್ಪಿದರೆ ಸಾಕು ಎಂದುಕೊಂಡ ಕಲ್ಯಾಣಿ ಮೆಲ್ಲನೆ ಬಾಟಲಿಯನ್ನು ಎತ್ತಿಡಲು ಎದ್ದಳು. ಅವಳ ಕೈ ಹಿಡಿದು ತಡೆದ ಮಧುವಂತಿ, 'ನಾಟ್ ಫೇರ್, ಆಟ ಮುಗಿಯುವವರೆಗೂ ಏಳುವಂತಿಲ್ಲ' ಎಂದಳು. ತನ್ನ ಕೈಹಿಡಿದಿದ್ದ ಮಧುವಂತಿಯ ಕೈಗಳನ್ನೇ ದಿಟ್ಟಿಸಿದ ಕಲ್ಯಾಣಿ, 'ನಾನು ಆಟದಲ್ಲಿ ಸೋತವಳು ಎಂದು ಒಪ್ಪಿಕೊಳ್ಳುತ್ತೇನೆ' ಎಂದಳು, 'ನೋ ನೋ ನೋ, ಅದೆಲ್ಲಾ ಆಗಲ್ಲ, ಏನಾದರೂ ಸುಲಭದ್ದೇ ಹೇಳುತ್ತೇನೆ, ನಿಮಗಿಷ್ಟವಾದ ಒಂದು ಸಿನಿಮಾ ಡಯಲಾಗ್ ಹೇಳಿ' ಎಂದಳು. ಮೃದುವಾಗಿ ತನ್ನ ಕೈ ಬಿಡಿಸಿಕೊಂಡ ಕಲ್ಯಾಣಿ ಮುಗುಳ್ನಕ್ಕು ಎದ್ದು, ಟೀಪಾಯಿಯ ಮೇಲೆ ಹೋಟೆಲಿನಿಂದ ತರಿಸಿದ್ದ ಅಡಿಗೆಯನ್ನೂ ಪ್ಲೇಟು, ಲೋಟಗಳನ್ನೂ ಜೋಡಿಸತೊಡಗಿದಳು.



ಗಡಿಯಾರದ ಮುಳ್ಳು ಹನ್ನೊಂದನ್ನು ದಾಟಿ, ಹಗುರಾದ ಹೆಜ್ಜೆಗಳಲ್ಲಿ ತೇಲುತ್ತಾ ಹನ್ನೆರಡರ ಕಡೆ ಸಾಗುತ್ತಿತ್ತು. ಮಧುವಂತಿ ಕೀ ತಿರುಗಿಸಿ ಕಾರನ್ನು ಸ್ಟಾರ್ಟ್ ಮಾಡಿದಳು. ಅವಳ ಪಕ್ಕದಲ್ಲಿ ಕುಳಿತಿದ್ದ ಸಾವನಿ ಇನ್ನೂ ತನ್ನದೇ ಲೋಕದಲ್ಲಿದ್ದಳು. ಹಿಂದಿನ ಸೀಟಿನಲ್ಲಿದ್ದ ವಿಭಾವರಿ ತನ್ನ ಹುಡುಗನಿಗೆ ಕರೆ ಮಾಡಿ ಎಲ್ಲಿ ಬಂದು ಪಿಕ್ ಮಾಡಬೇಕು ಎಂದು ಹೇಳುತ್ತಿದ್ದಳು. ಕಿಟಕಿ ಗಾಜಿಳಿಸಿದ ಮಧುವಂತಿಯ ಕೈ ಹಿಡಿದಿದ್ದ ಕಲ್ಯಾಣಿ, ಅವಳನ್ನೇ ದಿಟ್ಟಿಸುತ್ತಾ, '**Of all the gin joints in all the towns in all the world, she walks into mine... – Casa blanca**'. ಎಂದು ಒದ್ದೆ ದನಿಯಲ್ಲಿ ಹೇಳಿದಳು. ಮಧುವಂತಿ ಅರ್ಥವಾಗದಂತೆ ದಿಟ್ಟಿಸಿದಳು. 'ಅದೇ ಸಿನಿಮಾ ಡೈಲಾಗ್...' ಕಲ್ಯಾಣಿ ಹೇಳಿದಳು. 'ಅಯ್ಯೋ, ನಾನು ಮರೆತೇಬಿಟ್ಟಿದ್ದೆ...' ಮಧುವಂತಿ ನಕ್ಕಳು, 'ನನಗೆ ಮರೆಯಲು ಆಗಲೇ ಇಲ್ಲ' ಕಲ್ಯಾಣಿ ಕೈಬೀಸಿದಳು. ಮಳೆ ನಿಂತಿತ್ತು.


### ಎನ್. ಸಂಧ್ಯಾರಾಣಿ

ಕೋಲಾರ ಜಿಲ್ಲೆಯವರು. ನಾಟಕ ಮತ್ತು ಸಿನಿಮಾ ವಿಮರ್ಶಕಿ. 'ಅವಧಿ' ಅಂತರ್ಜಾಲ ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿದ್ದರು. ಪ್ರಕಟಿತ ಪುಸ್ತಕಗಳು: 'ಯಾಕೆ ಕಾಡುತಿದೆ ಸುಮ್ಮನೆ ನನ್ನನು' (ಅಂಕಣ ಬರಹಗಳು), 'ಪಾಂಡಿ ಎನ್ನುವ ರಂಗೋಲಿ' (ಪಾಂಡಿಚೇರಿ ಪ್ರವಾಸ ಕಥನ), 'ತುಂಬೆ ಹೂ' (ನ್ಯೂರೋಸರ್ಜನ್ ಡಾ. ನಾರಾಯಣ ರೆಡ್ಡಿಯವರ ಜೀವನಚರಿತ್ರೆ), 'ಜೋಗಿ ರೀಡರ್' (ಪತ್ರಕರ್ತ ಜೋಗಿ ಬರಹಗಳ ಸಂಪಾದನೆ), 'ಆನು ನಿನ್ನನು ಹಾಡಿದಲ್ಲದೆ ಸೈರಿಸಲಾರೆನಯ್ಯ' (ಬಿ.ವಿ. ಭಾರತಿ ಅವರೊಂದಿಗೆ ಕವನ ಸಂಕಲನ ಸಂಪಾದನೆ). 'ನಾತಿ ಚರಾಮಿ' ಸಿನಿಮಾಕ್ಕೆ ಕತೆ, ಸಂಭಾಷಣೆ ಬರೆದಿದ್ದಾರೆ.